# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 386 |
| ಸದಸ್ಯರ ಹೆಸರು | : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 10.03.2025 |
| ಉತ್ತರಿಸುವವರು | : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನಕಲಿ ವೈದ್ಯರುಗಳ ಸಂಖ್ಯೆ ಹೆಚ್ಚುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು) | ನಕಲಿ ವೈದ್ಯರು ವೈದ್ಯಕೀಯ ವೃತ್ತಿ ಮಾಡುವುದನ್ನು ತಡೆಗಟ್ಟಲು ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 (the Karnataka Private Medical Establishments Act, 2007) ರ ಸೆಕ್ಷನ್ 19(1) ಹಾಗೂ ಸೆಕ್ಷನ್ 22 ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಕಾಯ್ದೆಯ ಉದ್ಧೃತ ಭಾಗದ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.** |
| ಆ) | ಬಳ್ಳಾರಿ ಜಿಲ್ಲೆಯಲ್ಲಿ ಈ ರೀತಿಯ ನಕಲಿ ವೈದ್ಯರುಗಳ ಪ್ರಕರಣ ಕಂಡು ಬಂದಿದೆಯೇ; ಬಂದಿದ್ದಲ್ಲಿ ಅವರ ವಿರುದ್ಧ ಕೈಗೊಂಡ ಕ್ರಮಗಳೇನು; | ಬಳ್ಳಾರಿ ಜಿಲ್ಲೆಯಲ್ಲಿ ಡಿಸೆಂಬರ್ 2023ರಿಂದ ಮಾರ್ಚ್ 2025ರ ವರೆಗೆ ಒಟ್ಟು ಹದಿನೆಂಟು (18) ನಕಲಿ ವೈದ್ಯರ ಪ್ರಕರಣಗಳು ಬೆಳಕಿಗೆ ಬಂದಿದ್ದು, ಸದರಿಯವರುಗಳು ನಡೆಸುತ್ತಿದ್ದ ಕ್ಲಿನಿಕ್‌ಗಳನ್ನು ಮುಚ್ಚಿಸಿ, ಒಟ್ಟು ರೂ.16,50,000/-ಗಳ ದಂಡವನ್ನು ವಿಧಿಸಲಾಗಿದೆ.<br><br>**ಕೈಗೊಂಡ ಕ್ರಮದ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.** |
| ಇ) | ಈ ಜಿಲ್ಲೆಯಲ್ಲಿ ಈ ನಕಲಿ ವೈದ್ಯರುಗಳ ಹಾವಳಿ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | ನಕಲಿ ವೈದ್ಯರು ವೈದ್ಯಕೀಯ ವೃತ್ತಿ ಮಾಡುವುದನ್ನು ತಡೆಗಟ್ಟಲು ಆಯಾ ತಾಲ್ಲೂಕಿನ ತಾಲ್ಲೂಕು ಆರೋಗ್ಯ ಅಧಿಕಾರಿಗಳು ಹಾಗೂ ಕೆ.ಪಿ.ಎಂ.ಇ. ಪ್ರಾಧಿಕೃತ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಗೆ ಒಳಪಡುವ ಖಾಸಗಿ ವೈದ್ಯಕೀಯ ಸಂಸ್ಥೆಗಳಿಗೆ ಭೇಟಿ ನೀಡಿ, ನಿಯಮ ಉಲ್ಲಂಘಿಸಿದವರ ವಿರುದ್ಧ ಕೆ.ಪಿ.ಎಂ.ಇ. ಕಾಯ್ದೆಯಡಿ ಕ್ರಮ ಕೈಗೊಂಡು, ಜಿಲ್ಲಾ ಸಮಿತಿಯಾದ ಕೆ.ಪಿ.ಎಂ.ಇ. ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸುತ್ತಾರೆ.<br>ಸದರಿ ವರದಿಯನ್ನು ಆದರಿಸಿ, ಜಿಲ್ಲಾ ಸಮಿತಿಯು ನಿಯಮ ಉಲ್ಲಂಘಿಸಿದ ನಕಲಿ ವೈದ್ಯರ / ಕ್ಲಿನಿಕ್‌ಗಳ ವಿಚಾರಣೆ ನಡೆಸಿ, ಸದರಿಯವರು ತಪ್ಪಿತಸ್ಥರೆಂದು ಸಾಬೀತಾದಲ್ಲಿ ಅಂತಹವರ ವಿರುದ್ಧ ಜಿಲ್ಲಾ ಪ್ರಾಧಿಕಾರವು ಕೆ.ಪಿ.ಎಂ.ಇ. **ತಿದ್ದುಪಡಿ** ಅಧಿನಿಯಮ 2007 ರ ಸೆಕ್ಷನ್ 19(1) ಹಾಗೂ **ಕೆಪಿಎಂಇ ಅಧಿನಿಯಮ** ಸೆಕ್ಷನ್ 22 ರಂತೆ ಕ್ರಮ ಕೈಗೊಳ್ಳುತ್ತದೆ.<br><br>**ವಿವರವನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.** |
| ಈ) | ಈ ನಕಲಿ ವೈದ್ಯರುಗಳ ವಿರುದ್ಧ ಕೈಗೊಳ್ಳುವ ಕಾನೂನು ಕ್ರಮಗಳೇನು; ರಾಜ್ಯದಲ್ಲಿ ಇಲ್ಲಿಯವರೆಗೆ ಈ ವೈದ್ಯರುಗಳ ಮೇಲೆ ಕೈಗೊಂಡ ಪ್ರಕರಣಗಳೆಷ್ಟು? (ಮಾಹಿತಿ ಒದಗಿಸುವುದು) | ನಕಲಿ ವೈದ್ಯರು ವೈದ್ಯಕೀಯ ವೃತ್ತಿ ಮಾಡುವುದನ್ನು ತಡೆಗಟ್ಟಲು ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮ, 2007 ರ ಸೆಕ್ಷನ್ 19(1) ಹಾಗೂ ಸೆಕ್ಷನ್ 22 ರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>2023-24ನೇ ಸಾಲಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ 623 ನಕಲಿ ವೈದ್ಯರು ಪತ್ತೆಯಾಗಿದ್ದು, 163 ಕ್ಲಿನಿಕ್‌ಗಳಿಗೆ ನೋಟಿಸ್ ನೀಡಲಾಗಿದೆ, 193 ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ, 142 ಕ್ಲಿನಿಕ್‌ಗಳನ್ನು ಸೀಜ್ ಮಾಡಲಾಗಿದೆ. 89 ನಕಲಿ ವೈದ್ಯರಿಗೆ ದಂಡ ವಿಧಿಸಲಾಗಿದೆ ಮತ್ತು 36 ಪ್ರಕರಣಗಳು ನ್ಯಾಯಾಲಯದ ವಿಚಾರಣೆ ಹಂತದಲ್ಲಿವೆ.<br><br>**ಸದರಿ ಮಾಹಿತಿಯನ್ನು ಅನುಬಂಧ-4 ರಲ್ಲಿ ಲಗತ್ತಿಸಲಾಗಿದೆ.** |

**ಸಂಖ್ಯೆ: ಆಕುಕ 9 ಎಸ್ ಟಿ ಕ್ಯೂ 2025**

( ದಿನೇಶ್ ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

(2) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

(3) 2020ರ ಅಧಿನಿಯಮ ಸಂಖ್ಯೆ [illegible]ರ ಮೂಲಕ ದಿನಾಂಕ: 11.07.2020 ರಿಂದ ಜಾರಿಗೆ ಬರುವಂತೆ [illegible]

**17. ಅಪೀಲು.-** (1) 24ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶದ ಸಂದರ್ಭದಲ್ಲಿ ಹೊರತು 7ನೇ ಪ್ರಕರಣದ ಅಡಿಯಲ್ಲಿ ನೋಂದಣಿಯ ಅರ್ಜಿಯನ್ನು ತಿರಸ್ಕರಿಸಿದ ಅಥವಾ 15ನೇ ಪ್ರಕರಣದ ಅಡಿಯಲ್ಲಿ ನೋಂದಣಿಯನ್ನು ಅಮಾನತುಗೊಳಿಸಲಾದ ಅಥವಾ ರದ್ದುಗೊಳಿಸಲಾದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಮೂಲ ಆದೇಶದಿಂದ ಬಾಧಿತವಾದ ಖಾಸಗಿ ವೈದ್ಯಕೀಯ ಸಂಸ್ಥೆಯು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಫೀಜನ್ನು ಸಂದಾಯಮಾಡಿ ಅಪೀಲು ಪ್ರಾಧಿಕಾರಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅಪೀಲನ್ನು ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಲಾಗಿದೆಯೋ ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು.

(3) ಅಪೀಲು ಪ್ರಾಧಿಕಾರವು ವಿಚಾರಣೆಯನ್ನು ನಡೆಸಿದ ತರುವಾಯ, ಅಪೀಲು ಸಲ್ಲಿಸಿದ ದಿನಾಂಕದಿಂದ ಸಾಧ್ಯವಾದಷ್ಟು ಅರವತ್ತು ದಿನಗಳೊಳಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

**18. ಖಾಸಗಿ ವೈದ್ಯಕೀಯ ಸಂಸ್ಥೆಗಳು ತಮ್ಮಲ್ಲಿರುವ ಸರ್ಕಾರಿ ವೈದ್ಯರುಗಳ ಹೆಸರುಗಳನ್ನು ವರದಿಮಾಡುವುದು.-** ಪ್ರತಿಯೊಂದು ಖಾಸಗಿ ವೈದ್ಯಕೀಯ ಸಂಸ್ಥೆಯು ಸಮಾಲೋಚನೆಗಾಗಿ ಅಥವಾ ಯಾವುದೇ ಇತರೆ ಆಧಾರದ ಮೇಲೆ, ಹಣಸಂದಾಯ ಮಾಡುವ ಮೂಲಕವಾಗಲಿ ಅಥವಾ ಇಲ್ಲದಿರಲಿ, ಸೇವೆಸಲ್ಲಿಸಲು ಬಳಸಿಕೊಳ್ಳುತ್ತಿರುವ ತಮ್ಮಲ್ಲಿನ ಸರ್ಕಾರಿ ವೈದ್ಯರುಗಳ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯವರ ಹೆಸರುಗಳನ್ನು ರಾಜ್ಯಸರ್ಕಾರಕ್ಕೆ ಮತ್ತು [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ಕ್ಕೆ ವರದಿಮಾಡತಕ್ಕದ್ದು.

(1) 2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**19. ದಂಡನೆಗಳು.-** (1) ಯಾವೊಬ್ಬ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾಗುವ ನೋಂದಣಿ ಇಲ್ಲದ ಒಂದು ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ, ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ, ಅವನು, ಅಪರಾಧ ನಿರ್ಣಯವಾದ ನಂತರ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು [1][ಒಂದು ಲಕ್ಷ][1] ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಒಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಣೀತ ಅಪರಾಧಿಯಾಗಿದ್ದಲ್ಲಿ, [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1]ವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು, ಅಂಥ ನೋಂದಣಿಯು ರದ್ದು ಅಥವಾ ಅಮಾನತುಗೊಂಡಿದ್ದು ಅಂಥ ರದ್ದತಿ ಅಥವಾ ಅಮಾನತಿನ ವಿರುದ್ಧ ದಾಖಲಿಸಲಾದ ಅಪೀಲು ಇತ್ಯರ್ಥದಲ್ಲಿದ್ದ ಹೊರತು ಅದನ್ನು ಕೂಡಲೇ ಮುಚ್ಚುವಂತೆ ಆದೇಶಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು ನಿರ್ದೇಶನದಲ್ಲಿ ತಿಳಿಸಿರತಕ್ಕದ್ದು ಮತ್ತು ಅದು, ಅಂಥ ವರ್ಗಾವಣೆ ಮಾಡುವವರೆಗೂ ಒಳರೋಗಿಗಳ ಸುರಕ್ಷತೆ ಮತ್ತು ಅಭಿರಕ್ಷೆಗೆ ಸಂಬಂಧಪಟ್ಟ ಇತರೆ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

ಖಾಸಗಿ ವೈದ್ಯಕೀಯ ಸಂಸ್ಥೆಯ ವ್ಯವಸ್ಥಾಪಕನಿಗೆ ಅಂಥ ಮುಟ್ಟುಗೋಲು ಹಾಕಿಕೊಂಡ ಬಗ್ಗೆ ಸೂಕ್ತ ಕಾರಣಗಳನ್ನು ತಿಳಿಸತಕ್ಕದ್ದು.

(ಸಿ) ಅಂಥ ವಿಚಾರಣೆಯನ್ನು ನಡೆಸುವುದು ಮತ್ತು ಸ್ಥಳದಲ್ಲೇ ತೀರ್ಮಾನ ಕೈಗೊಳ್ಳಬಹುದು ಅಥವಾ ಅನ್ಯಥಾ ತಾನು ಅವಶ್ಯಕವೆಂದು ಭಾವಿಸಬಹುದಾದಂಥ ಯಾವೊಬ್ಬ ವ್ಯಕ್ತಿಯ ಹೇಳಿಕೆಯನ್ನು ತೆಗೆದುಕೊಳ್ಳುವುದು.

(ಡಿ) ಈ ಅಧಿನಿಯಮದ ಉದ್ದೇಶಗಳನ್ನು ಕೈಗೊಳ್ಳುವುದಕ್ಕಾಗಿ, ಅವಶ್ಯಕವೆಂದು ಭಾವಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು:

ಪರಂತು, ಯಾವೊಬ್ಬ ವ್ಯಕ್ತಿಯನ್ನು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಪ್ರಶ್ನೆಗೆ ಉತ್ತರಿಸಲು ಅಗತ್ಯಪಡಿಸತಕ್ಕದ್ದಲ್ಲ ಅಥವಾ ತನ್ನನ್ನು ಸ್ವತಃ ಅಪರಾಧಿ ಎಂದು ಸಿಕ್ಕಿಸುವ ಪ್ರವೃತ್ತಿಯುಳ್ಳ ಯಾವುದೇ ಸಾಕ್ಷ್ಯವನ್ನು ನೀಡುವಂತೆ ಅಗತ್ಯಪಡಿಸತಕ್ಕದ್ದಲ್ಲ:

ಮತ್ತು ಪರಂತು, ಯಾವುದೇ ವಸತಿ ಸ್ಥಳವನ್ನು (ಖಾಸಗಿ ವೈದ್ಯಕೀಯ ಸಂಸ್ಥೆ-ಹಾಗೂ-ವಸತಿಗೃಹವಲ್ಲದ್ದು) ಮತ್ತು ಆ ಪ್ರದೇಶದ ಅಧಿಕಾರ ವ್ಯಾಪ್ತಿಯುಳ್ಳ ಮ್ಯಾಜಿಸ್ಟ್ರೇಟನು ನೀಡಿದ ಶೋಧನಾ ವಾರೆಂಟನ್ನು ಪ್ರಾಧಿಕಾರಿಯು ಹೊಂದಿದ್ದ ಹೊರತು, ಪ್ರಾಧಿಕೃತ ಅಧಿಕಾರಿಯು ಪ್ರವೇಶಿಸತಕ್ಕದ್ದಲ್ಲ ಮತ್ತು ಪರಿಶೋಧಿಸತಕ್ಕದ್ದಲ್ಲ ಮತ್ತು ಈ ಪ್ರಕರಣದ ಅಡಿಯಲ್ಲಿಯ ಎಲ್ಲ ಶೋಧನೆಗಳು ಮತ್ತು ಮುಟ್ಟುಗೋಲುಗಳನ್ನು ಸಾಧ್ಯವಾದಷ್ಟು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

(2) ಪ್ರಾಧಿಕೃತ ಅಧಿಕಾರಿಯು (1)ನೇ ಉಪಪ್ರಕರಣದ ಅಡಿಯಲ್ಲಿ ತಾನು ಮಾಡಿದ ತಪಾಸಣೆ, ಶೋಧನೆ ಮತ್ತು ಮುಟ್ಟುಗೋಲಿನ ಫಲಿತಾಂಶಗಳಿಗೆ ಸಂಬಂಧಿಸಿದಂತೆ ನೋಂದಣಿ ಪ್ರಾಧಿಕಾರಿಗೆ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು [1][ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ][1] ರಿಯು ಈ ಅಧಿನಿಯಮದ ಅಡಿಯಲ್ಲಿ ಸದರಿ ವರದಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.

(1)2018ರ ಅಧಿನಿಯಮ ಸಂಖ್ಯೆ 01ರ ಮೂಲಕ ದಿನಾಂಕ: 04.04.2019 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**22. ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಸೀಲ್ ಮಾಡುವುದು.**- (1) 19ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಮಾಡಿದ ವರದಿಯ ಆಧಾರದ ಮೇಲೆ ಅಥವಾ ಅನ್ಯಥಾ 7ನೇ ಪ್ರಕರಣದ ಅಡಿಯಲ್ಲಿ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿ ಮಾಡದೇ ನಡೆಸಲಾಗುತ್ತಿದೆ ಅಥವಾ ನಿರ್ವಹಿಸಲಾಗುತ್ತಿದೆ ಎಂದು ನೋಂದಣಿ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅಂಥ ಖಾಸಗಿ ಸಂಸ್ಥೆಯನ್ನು ಕೂಡಲೇ ಮುಚ್ಚುವಂತೆ ಆದೇಶಿಸಬಹುದು ಮತ್ತು ಆವರಣವನ್ನು ಮೊಹರು ಬಂದ್ ಸಹ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ತೊಂದರೆಗೊಳಗಾಗಿರಬಹುದಾದ ವ್ಯಕ್ತಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವು ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಒಳರೋಗಿಗಳನ್ನು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರೆ ಖಾಸಗಿ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು ನಿರ್ದೇಶನವನ್ನು ಒಳಗೊಂಡಿರತಕ್ಕದ್ದು ಮತ್ತು ಅದು, ಅಂಥ ವರ್ಗಾವಣೆ ಮಾಡುವವರೆಗೂ ಒಳರೋಗಿಗಳ ಸುರಕ್ಷತೆ ಮತ್ತು ಅಭಿರಕ್ಷೆಗೆ ಸಂಬಂಧಪಟ್ಟ ಉಪಬಂಧಗಳನ್ನು ಸಹ ಒಳಗೊಂಡಿರತಕ್ಕದ್ದು.

ಅನುಬಂಧ-2

## BALLARI DISTRICT - FAKE DOCTORS DETAILS

| Sl No. | District | Taluk | Fake doctors name & obtained qualification | Address | Date of FIR | Mobile number | Any action taken against fake doctors by concerned district Registration and Grievance Redressal Authority | Any legal cases filed against fake doctor in judicial court | Any cases booked by District Registration and Grievance Redressal Authority as per KPME Act | Penalty Amount |
|---|---|---|---|---|---|---|---|---|---|---|
| 1 | Ballari | Ballari | S K Bishwas | Mulangi Sanjeevappa Street,Bellary | 06.12.2023 | 9448024065 | Sezied the Clinic | No | FIR Done and submitted to District Commissioner Bellary | 50,000 |
| 2 | Ballari | Ballari | Nagendra Poojary | Cowl Bazar , Main Road,Bellary | 06.12.2023 | | Sezied the Clinic | No | FIR Done and submitted to District Commissioner Bellary | 50,000 |
| 3 | Ballari | Ballari | E Ravi Kumar | Near Marremma Temple, Koralgudi ,Village Bellary Taluk,Bellary District | 13.12.2023 | 9611175794 | Closed the Clinic | No | FIR Done and submitted to District Commissioner Bellary | 50,000 |
| | | | | | 07.01.2025, | | | Yes | FIR NO. 0005/2025 date 07.01.2025 at Moka Police Station | |
| 4 | Ballari | Sandur | Ajjappa | Bandri Village, Sandur Taluk, Ballari District | 22.05.2024 | 9980628182 | Sezied the Clinic | No | FIR Done and submitted to District Commissioner Bellary | 1,00,000 |
| 5 | Ballari | Ballari | Vijaya Basker Reddy | Somasamudra Village, Ballari Taluk, Ballari District | 28.05.2024 | 9980716801 | Sezied the Clinic | No | FIR Done and submitted to District Commissioner Bellary | 1,00,000 |
| 6 | Ballari | Ballari | Pakkerappa | Somasamudra Village, Ballari Taluk, Ballari District | 28.05.2024 | 9964564856 | Sezied the Clinic | No | FIR Done and submitted to District Commissioner Bellary | 1,00,000 |
| 7 | Ballari | Ballari | D. Paritosh Gain | Small Vegetable Market, Bangalore Road, Ballari | 20.06.2024 | 9341715073 | Closed the Clinic | No | FIR Done and submitted to District Commissioner Bellary | 1,00,000 |
| 8 | Ballari | Ballari | Das | Mulangi Sanjeevappa Street, Bellary | 20.06.2024 | 7569910554 | Sezied the Clinic | No | FIR Done and submitted to District Commissioner Bellary | 1,00,000 |
| 9 | Ballari | Sandur | J. Ajjanna | Ward No. 4, Opp 3rd Anganawadi Center, Bandri Village, Ballari Taluk, Ballari District | 22.05.2024 | 9980628182 | Sezied the Clinic | No | FIR Done and submitted to District Commissioner Bellary | 1,00,000 |

CS CamScanner

## BALLARI DISTRICT - FAKE DOCTORS DETAILS

| Sl No. | District | Taluk | Fake doctors name & obtained qualification | Address | Date of FIR | Mobile number | Any action taken against fake doctors by concerned district Registration and Grievance Redressal Authority | Any legal cases filed against fake doctor in judicial court | Any cases booked by District Registration and Grievance Redressal Authority as per KPME Act | Penalty Amount |
|---|---|---|---|---|---|---|---|---|---|---|
| 10 | Ballari | Siruguppa | M.B. Ramzani Sab | Near GHPS School, Valmiki Circle, Ward No. 3, Shanvaspura Village, Siruguppa Taluk, Ballari District | 05.09.2024 | 9900752307 | Sezied the Clinic | No | FIR Done | 1,00,000 |
| 11 | Ballari | Ballari | Sreedhar.C | Pinjar voin Ballari | 19.10.2024 | 9553859106 | Sezied the Clinic | No | FIR Done and submitted to District Commissioner | 1,00,000 |
| 12 | Ballari | Siruguppa | K. Chandrashekar | Banchi Camp, K. Sugoor road, Siruguppa Taluk Ballari District | 29.10.2024 | 9980324823 | Sezied the Clinic | No | FIR Done | 1,00,000 |
| 13 | Ballari | Ballari | Basavaraj | Jalibenchi Village Ballari Taluk, Ballari District | 09.12.2024 | 9743575519 | Sezied the Clinic | No | FIR Done | 1,00,000 |
| 14 | Ballari | Ballari | Rajanna | Kappagalu Village, Ballari Taluk, Ballari District | 20.12.2024 | 9515028593 | Sezied the Clinic | No | FIR Done | 1,00,000 |
| 15 | Ballari | Ballari | Rehman | Kappagalu Village, Ballari Taluk, Ballari District | 20.12.2024 | 8792240236 | Sezied the Clinic | No | FIR Done | 1,00,000 |
| 16 | Ballari | Ballari | Sheshavalli | Kappagalu Village, Ballari Taluk, Ballari District | 20.12.2024 | 9900124773 | Sezied the Clinic | No | FIR Done | 1,00,000 |
| 17 | Ballari | Ballari | Guruprakash | Kappagalu Village, Ballari Taluk, Ballari District | 20.12.2024 | 8688720958 | Sezied the Clinic | No | FIR Done | 1,00,000 |
| 18 | Ballari | Ballari | Mahadev | Kappagalu Village, Ballari Taluk, Ballari District | 20.12.2024 | 9739785680 | Sezied the Clinic | No | FIR Done | 1,00,000 |

CS CamScanner

[1][4. **ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ.**– ಪ್ರತಿಯೊಂದು ಜಿಲ್ಲೆಯಲ್ಲಿ, ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಅರ್ಹತೆಯನ್ನು ಹೊಂದಿರುವ, ಈ ಮುಂದಿನ ನಾಮ ನಿರ್ದೇಶಿತ ಸದಸ್ಯರನ್ನು ಒಳಗೊಂಡ ಒಂದು ನೋಂದಣಿ ಮತ್ತು ಕುಂಮಕೊರತೆ ನಿವಾರಣಾ ಪ್ರಾಧಿಕಾರವು ಇರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಜಿಲ್ಲೆಯ ಜಿಲ್ಲಾಧಿಕಾರಿ | ಅಧ್ಯಕ್ಷರು |
| (ಬಿ) | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯ ಕಾರ್ಯದರ್ಶಿ |
| (ಸಿ) | ಜಿಲ್ಲಾ ಆಯುಷ್ ಅಧಿಕಾರಿ | ಸದಸ್ಯ |
| (ಡಿ) | ಭಾರತೀಯ ವೈದ್ಯಕೀಯ ಸಂಘದಿಂದ ಮತ್ತು ಇನ್ನೊಂದು ಇತರ ಸಂಘದಿಂದ, ಪ್ರತಿಯೊಂದರಿಂದಲೂ ಒಬ್ಬೊಬ್ಬ ಸದಸ್ಯರು | ಸದಸ್ಯರು |
| (ಇ) | ಪ್ರಾಧಿಕಾರವು ಕುಂದುಕೊರತೆ ನಿವಾರಣಾ ಕಾರ್ಯವನ್ನು ನಿರ್ವಹಿಸುವಾಗ ಒಬ್ಬ ಮಹಿಳಾ ಪ್ರತಿನಿಧಿ | ಸದಸ್ಯರು |

][1]

ಅನುಬಂಧ - 4

| FAKE DOCTORS DETAILS FROM SEP-2023 TO SEP-2024 | | | | | | | |
|---|---|---|---|---|---|---|---|
| Sl. No | District | Fake Doctor count District wise | Notice issued | Closed | Seized | Penalty | Any legal cases filed against fake doctor in judicial court |
| 1 | Bagalkote | 36 | 0 | 22 | 13 | 0 | 1 |
| 2 | Ballari | 9 | 0 | 0 | 1 | 8 | 0 |
| 3 | Belagavi | 3 | 0 | 0 | 0 | 3 | 0 |
| 4 | Bengaluru Rural | 0 | 0 | 0 | 0 | 0 | 0 |
| 5 | Bengaluru urban | 15 | 10 | 3 | 2 | 0 | 0 |
| 6 | Bidar | 9 | 0 | 0 | 0 | 8 | 1 |
| 7 | Chamarajanagara | 20 | 0 | 11 | 9 | 0 | 0 |
| 8 | Chikkaballapura | 0 | 0 | 0 | 0 | 0 | 0 |
| 9 | Chikkamagaluru | 2 | 0 | 2 | 0 | 0 | 0 |
| 10 | Chitradurga | 1 | 0 | 1 | 0 | 0 | 0 |
| 11 | Dakshina Kannada | 17 | 9 | 8 | 0 | 0 | 0 |
| 12 | Davanagere | 2 | 0 | 0 | 0 | 2 | 0 |
| 13 | Dharwad | 5 | 0 | 5 | 0 | 0 | 0 |
| 14 | Gadag | 3 | 0 | 0 | 3 | 0 | 0 |
| 15 | Hassan | 0 | 0 | 0 | 0 | 0 | 0 |
| 16 | Haveri | 12 | 6 | 5 | 0 | 0 | 1 |
| 17 | Kalaburagi | 64 | 0 | 0 | 0 | 64 | 0 |
| 18 | Kodagu | 0 | 0 | 0 | 0 | 0 | 0 |
| 19 | Kolar | 115 | 0 | 0 | 106 | 0 | 9 |
| 20 | Koppal | 33 | 0 | 33 | 0 | 0 | 0 |
| 21 | Mandya | 0 | 0 | 0 | 0 | 0 | 0 |
| 22 | Mysuru | 2 | 0 | 0 | 0 | 0 | 2 |
| 23 | Raichur | 49 | 28 | 10 | 5 | 0 | 6 |
| 24 | Ramanagara | 1 | 0 | 0 | 1 | 0 | 0 |
| 25 | Shivamogga | 14 | 0 | 13 | 0 | 0 | 1 |
| 26 | Tumakuru | 84 | 48 | 36 | 0 | 0 | 0 |
| 27 | Udupi | 3 | 0 | 0 | 2 | 1 | 0 |
| 28 | Uttara Kannada | 2 | 1 | 1 | 0 | 0 | 0 |
| 29 | Vijayanagara | 81 | 56 | 18 | 0 | 3 | 4 |
| 30 | Vijayapura | 30 | 4 | 25 | 0 | 0 | 1 |
| 31 | Yadagiri | 11 | 1 | 0 | 0 | 0 | 10 |
| | Total | 623 | 163 | 193 | 142 | 89 | 36 |